ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 410 ಸಮುಸ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 20.02.2018

# "ಸುತ್ತೋಲೆ"

ವಿಷಯ:- ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿನ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು (10 ಮಹಾನಗರ ಪಾಲಿಕೆಗಳು ಒಳಗೊಂಡಂತೆ ಹಾಗೂ ಬಿಬಿಎಂಪಿಯನ್ನು ಹೊರತುಪಡಿಸಿ) ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವ ಕಾಮಗಾರಿಗಳ ಟೆಂಡರ್‌ಗಳಲ್ಲಿ ಕರ್ನಾಟಕ ಸರ್ಕಾರದ **Standard Tender Document KW-4** ನಲ್ಲಿನ ಟೆಂಡರ್ ಕ್ಲಾಸ್: 29.1 ರಂತೆ **Unbalanced Tenders** ನ ಮೊತ್ತಕ್ಕೆ **Additional Security Deposit** ಅನ್ನು ಪಡೆಯುತ್ತಿರುವ ಬಗ್ಗೆ ವಿನಾಯಿತಿಯನ್ನು ನೀಡುವ ಕುರಿತು.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುವ ಎಲ್ಲಾ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕರ್ನಾಟಕ ಸರ್ಕಾರದ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮಗಳು 2000 ಹಾಗೂ ಕರ್ನಾಟಕ ಸರ್ಕಾರದ Standard Tender Documents KW-1 to KW-4 ಗಳನ್ನು ಪಾಲನೆ ಮಾಡಿಕೊಂಡು ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದ್ದು, ಕೆಲವು Minus ಟೆಂಡರ್‌ಗಳಲ್ಲಿನ Seriously Unblanced Tender ಗಳ ವ್ಯತ್ಯಾಸದ ಮೊತ್ತಕ್ಕೆ Standard Tender Document KW-4 ನ ಟೆಂಡರ್ ಕ್ಲಾಸ್ 25.5 ಮತ್ತು 29.1 ರಂತೆ ಗುತ್ತಿಗೆದಾರರಿಂದ Additional Security Deposit ಅನ್ನು ಪಡೆಯಲಾಗುತ್ತಿದೆ.

ಸರ್ಕಾರ, ಪೌರಾಡಳಿತ ನಿರ್ದೇಶನಾಲಯ ಮತ್ತು ಕೆಳಹಂತದಲ್ಲಿ ಅನುಮೋದಿಸುವ ಟೆಂಡರ್‌ಗಳಲ್ಲಿ ಬಹಳಷ್ಟು ಟೆಂಡರ್‌ಗಳು ಹೆಚ್ಚು ಸ್ಪರ್ಧಾತ್ಮಕವಾಗಿ, ಟೆಂಡರ್ ದರಗಳು Minus 2% ನಿಂದ Minus 15% ವರೆಗೆ ಕಡಿಮೆ ದರಗಳು ಬರುತ್ತಿದ್ದು, ಈ ವ್ಯತ್ಯಾಸದ ಮೊತ್ತಕ್ಕೆ ಮೇಲಿನ ಕರ್ನಾಟಕ ಸರ್ಕಾರದ Standard Tender Document KW-4 ರಡಿಯಲ್ಲಿನ ಟೆಂಡರ್ ಕ್ಲಾಸ್ 25.5 ಮತ್ತು 29.1 ರಂತೆ Additional Security ಯನ್ನು ಪಡೆಯುತ್ತಿದ್ದು, ಇದರಿಂದಾಗಿ ಗುತ್ತಿಗೆದಾರರಿಗೆ ಹೆಚ್ಚು ಆರ್ಥಿಕ ಹೊರೆಯಾಗಿ ಸ್ಪರ್ಧಾತ್ಮಕ ದರಗಳು ನಮೂದಿಸುವ ಗುತ್ತಿಗೆದಾರರಿಗೆ ಪ್ರೋತ್ಸಾಹ ಇಲ್ಲದೇ ಹಿನ್ನೆಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸ್ಪರ್ಧಾತ್ಮಕ ದರಗಳನ್ನು ನಮೂದಿಸಿದ ಗುತ್ತಿಗೆದಾರರೂ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಿರುವುದನ್ನು ಪೌರಾಡಳಿತ ನಿರ್ದೇಶಕರೂ ಸಹ ಸರ್ಕಾರದ ಗಮನಕ್ಕೆ ತಂದಿರುತ್ತಾರೆ.

ಮೇಲಿನ ಪ್ರಕರಣವನ್ನು ಪರಿಶೀಲಿಸಲಾಗಿ, ಕರ್ನಾಟಕ ಸರ್ಕಾರದ ಪಾರದರ್ಶಕೆ ಕಾಯ್ದೆ 1999 ಮತ್ತು ನಿಯಮಗಳು 2000 ದನ್ವಯ ಹೆಚ್ಚಿನ ಬಿಡ್ಡುದಾರರು ಭಾಗವಹಿಸಿ ಹೆಚ್ಚು ಸ್ಪರ್ಧಾತ್ಮಕ ದರಗಳು ಬಂದಲ್ಲಿ ಸರ್ಕಾರಕ್ಕೆ ಹೆಚ್ಚು ಲಾಭದಾಯಕವಾಗುವ ಸಾದ್ಯತೆ ಇರುವುದರಿಂದಲೂ. Minus ಟೆಂಡರ್‌ಗಳಲ್ಲಿ ಹೆಚ್ಚಿನ ಬಿಡ್ಡುದಾರರು ಭಾಗವಹಿಸಿ ಹೆಚ್ಚು ಸ್ಪರ್ಧಾತ್ಮಕ ದರಗಳು ಬರುವ ಸಾಧ್ಯತೆ ಇರುವುದರಿಂದ, ಪಾರದರ್ಶಕ ಕಾಯ್ದೆಯ ಧ್ಯೇಯೋದ್ದೇಶಗಳನ್ವಯ ಗುತ್ತಿಗೆದಾರರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಶೇಕಡಾ 10% ರ ವರೆಗಿನ Minus ಟೆಂಡರ್ ಪ್ರೀಮಿಯಂಉಳ್ಳ ಟೆಂಡರ್‌ಗಳಿಗೆ (No Additional Security for Tender [illegible] Additional Security ಯನ್ನು [illegible] [illegible] ಶೇಕಡಾ 10% ಕ್ಕಿಂತ ಹೆಚ್ಚಿನ ಟೆಂಡರ್ ಪ್ರೀಮಿಯಂಉಳ್ಳ Minus ಟೆಂಡರ್‌ಗಳಿಗೆ ಮಾತ್ರ Additional Security ಯನ್ನು ಪಡೆಯುವುದು ಸೂಕ್ತವಾಗಿರುತ್ತದೆ.



ಕು॥ ಶುಮಾಂಗಲಿ
23/2/18

ಮೇಲಿನ ಪ್ರಸ್ತಾವನೆಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಲಾಗಿದ್ದು, ಆರ್ಥಿಕ ಇಲಾಖೆಯು ತಮ್ಮ ಹಿಂಬರಹದ ಸಂಖ್ಯೆ: ಆಇ 651 ವೆಚ್ಚ-9/2017 ದಿನಾಂಕ: 11.12.2017 ರಲ್ಲಿ "ಅಸಮತೋಲನ ಟೆಂಡರ್ (Unbalanced Tenders) ಗಳಿಗೆ ಹೆಚ್ಚುವರಿ ಭದ್ರತಾ ಠೇವಣಿ ತೆಗೆದುಕೊಳ್ಳುವುದನ್ನು ನಿರ್ಧರಿಸಲು ಹಾಗೂ ಸರ್ಕಾರಕ್ಕೆ ಮತ್ತು ಸಂಗ್ರಹಣಾ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟವಾಗದಂತೆ ಸಮಂಜಸ ಮೊತ್ತವನ್ನು ನಿಗಧಿಪಡಿಸಲು ಆಯಾ ಸಂಗ್ರಹಣಾ ಪ್ರಾಧಿಕಾರವು ಸಕ್ಷಮವಾಗಿರುತ್ತದೆ. ಅದರಂತೆ ಹೆಚ್ಚುವರಿ ಭದ್ರತಾ ಠೇವಣಿ ತೆಗೆದುಕೊಳ್ಳುವುದನ್ನು ತಮ್ಮ ಹಂತದಲ್ಲಿಯೇ ನಿರ್ಧರಿಸಲು ಕ್ರಮವಹಿಸಬಹುದು ಎಂದು ನಗರಾಭಿವೃದ್ಧಿ ಇಲಾಖೆಗೆ ಸೂಚನೆ ನೀಡಿರುತ್ತದೆ".

ಹಾಗೆಯೇ ಕರ್ನಾಟಕ ಸರ್ಕಾರದ Standard Tender Document KW-4 ನ ಟೆಂಡರ್ ಕ್ಲಾಸ್ 29.1 ರಂತೆ ಗುತ್ತಿಗೆದಾರರಿಂದ Security Deposit ಅನ್ನು 5% of the Contract price plus additional security for unbalanced tender ನ ಮೊತ್ತಕ್ಕೆ ಪಡೆಯಬೇಕಾಗಿದ್ದು, Unbalanced Tender ಗೆ ಸಂಬಂಧಿಸಿದಂತೆ ಸದರಿ ಕ್ಲಾಸ್‌ನಲ್ಲಿ ಯಾವುದೇ ವಿವರಣೆಯಾಗಲಿ ಅಥವಾ ಎಷ್ಟು ಮೊತ್ತಕ್ಕೆ Additional Security ಯನ್ನು ಪಡೆಯಬೇಕು ಎಂಬ ಬಗ್ಗೆ ಯಾವುದೇ ವಿವರಣೆ ಇಲ್ಲದೇ ಇದ್ದು, ಈ ಬಗ್ಗೆ ಸಂಗ್ರಹಣಾ ಇಲಾಖೆಯು ಸೂಕ್ತ ಮಿತಿಯನ್ನು ನಿಗಧಿ ಪಡಿಸಬೇಕಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ Standard Tender Document KW-4 ನ Tender Clause ನಲ್ಲಿನ Clause 29.1 ಕ್ಕೆ ಈ ಕೆಳಕಂಡಂತೆ ವಿವರಣೆಯನ್ನು ಸೇರ್ಪಡೆ ಮಾಡಿ ಸದರಿ ವಿವರಣೆಯನ್ನೊಳಗೊಂಡ Security Deposit ಗೆ ಸಂಬಂಧಿಸಿದ ಕ್ಲಾಸ್: 29.1 ಅನ್ನು ಮುಂದೆ ಕರೆಯುವ ಎಲ್ಲಾ ಟೆಂಡರ್ ಡಾಕ್ಯೂಮೆಂಟ್‌ಗಳಲ್ಲಿ ಅಳವಡಿಸಿಕೊಂಡು ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲು ಎಲ್ಲಾ ಸಂಬಂಧಿಸಿದ ಸಂಗ್ರಹಣಾ ಪ್ರಾಧಿಕಾರಗಳು ಹಾಗೂ ಟೆಂಡರ್ ಕರೆಯುವ ಪ್ರಾಧಿಕಾರಗಳಿಗೆ (Procurement Authorities & Tender Inviting Authorities) ಸೂಚಿಸಲಾಗಿದೆ.

**Clause 29.1:** Within 20 days of receipt of the Letter of Acceptance, the successful Tenderer shall deliver to the Employer a Security deposit in any of the forms given below for an amount equivalent to 5% of the Contract price plus Additional Security for Unbalanced Tenders* in accordance with Clause 25.5 of ITT and Clause 43 of the Conditions of Contract.

- Cash or
- Banker's cheque/Demand draft/Pay Order in favour of ................ payable at.................. or
- A bank guarantee in the form given in Section 10; or
- Specified Small Savings Instruments pledged to ...........................

* (Unbalanced Tender is defined as a tender where the tender premium is negative beyond 10%. Additional Security shall be collected for all Tenders whose Tender Premium is negative beyond 10%, and no Additional Security shall be collected for all tenders whose Tender Premium is upto Minus 10%. Additional Security shall be collected to the extent of negative premium beyond minus 10%)

ಲಲಿತಾಬಾಯಿ.ಕೆ

ನಗರಾಭಿವೃದ್ಧಿ ಇಲಾಖೆ.

ಪ್ರತಿ ಇವರಿಗೆ:-

1) ಮಹಾಲೇಖಪಾಲರು, (ಎ&ಇ) ಕರ್ನಾಟಕ, ಬೆಂಗಳೂರು.
2) ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,
3) ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ,
4) ವ್ಯವಸ್ಥಾಪಕ ನಿರ್ದೇಶಕರು, ಕೆಯುಡಬ್ಲ್ಯೂಎಸ್‌ಡಿಬಿ, ಬೆಂಗಳೂರು,
5) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು,
6) ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ, ಬೆಂಗಳೂರು,
7) ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು,
8) ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಯ ಆಯುಕ್ತರುಗಳಿಗೆ,
9) ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರುಗಳಿಗೆ, ನಗರ ಮತ್ತು ಗ್ರಾಮಾಂತರ ಯೋಜನೆ ನಿರ್ದೇಶಕರ ಮುಖಾಂತರ'
10) ಶಾಖಾ ರಕ್ಷಾಕಡತ/ಹೆಚ್ಚುವರಿ ಪ್ರತಿಗಳು,

ಸಂಖ್ಯೆ: ನಗ್ರಾಯೋ:ಜಂನಿ:CIRC:2018-19
ಸುತ್ತೋಲೆ ಸಂಖ್ಯೆ:ನಅಇ 410 ಸಮಸ 2017
ದಿನಾಂಕ:20-02-2018

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ,
ಬಹುಮಹಡಿಗಳ ಕಟ್ಟಡ, 4ನೇ ಹಂತ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 25 APR 2018

ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

1) ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ.
2) ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು.
3) ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ವಿಭಾಗೀಯ ಕಛೇರಿ, ಬೆಂಗಳೂರು/ ಮೈಸೂರು/ ಗುಲ್ಬರ್ಗಾ.
4) ಆಯುಕ್ತರು, ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು
5) ಸದಸ್ಯ ಕಾರ್ಯದರ್ಶಿಗಳು, ರಾಜ್ಯದ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳು.
6) ಮುಖ್ಯಾಧಿಕಾರಿಗಳು/ಆಯುಕ್ತರು, ಪುರಸಭೆ/ ನಗರಸಭೆ ಯೋಜನಾ ಪ್ರಾಧಿಕಾರಗಳು.
7) ಎಲ್ಲಾ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಗಳಿಗೆ.
8) ಕೇಂದ್ರ ಕಛೇರಿಯ ಎಲ್ಲಾ ತಾಂತ್ರಿಕ ಸಿಬ್ಬಂದಿಗಳಿಗೆ.
9) ಹೆಚ್ಚುವರಿ ಪ್ರತಿಗಳು.

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರ ಪರವಾಗಿ